ಕುರುಬ ಜಾತಿ ಮತ್ತು ಕೊಡಗು ಜಿಲ್ಲೆಯಲ್ಲಿರುವ ಮೂಲನಿವಾಸಿ ಹಾಲುಮತದವರನ್ನು ಪರಿಶಿಷ್ಟ ಪಂಗಡದ ಗುಂಪಿಗೆ ಸೇರಿಸುವಂತೆ ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಮಾಡಿರುವುದು ನಿಜವೇ?

ಆ) ಹಾಗಿದ್ದಲ್ಲಿ ಮೇಲ್ಕಂಡ ಜಾತಿ, ಜನಾಂಗಗಳು ಗಿರಿಜನರೆಂದು ನಿಷ್ಕರ್ಷಿಸುವ ಯಾವ ಯಾವ ಅರ್ಹತೆಗಳನ್ನು ಪಡೆದಿರುತ್ತಾರೆ?

ಇ) ಗಿರಿಜನರ ಪಟ್ಟಿಯಲ್ಲಿ ಸೇರಿಸಲು ಇತರ ಜಾತಿಯವರಿಗೆ ಇರಬೇಕಾದ ಕೇಂದ್ರ ಸರ್ಕಾರದ ನಿಯಮಾವಳಿಯ ಮಾನದಂಡಗಳೇನ?

ಶ್ರೀ ಕೆ. ಎಂ. ಕೃಷ್ಣಾರೆಡ್ಡಿ (ಸಮಾಜ ಕಲ್ಯಾಣ ಸಚಿವರು) :

ಅ) ಹೌದು.

ಆ) ಮಂಡಲ್ ಆಯೋಗದ ವರದಿಯಂತೆ ಗಂಗಾಮತ ಮತ್ತು ಅದರ 38 ಪರ್ಯಾಯ ಪಂಗಡಗಳನ್ನು ಪರಿಶಿಷ್ಟ ವರ್ಗದ ಪಟ್ಟಿಯಲ್ಲಿ ಸೇರಿಸಲು ಶ್ರೀ ಡಿ.ಕೆ. ನಾಯ್ಕರ್‌ರವರ ಅಧ್ಯಕ್ಷತೆಯಲ್ಲಿ ರಚಿಸಲಾಗಿದ್ದ ಉಪ ಸಮಿತಿಯು ಶಿಫಾರಸ್ಸು ಮಾಡಿದ್ದು, ಅದರಂತೆ ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಮಾಡಿದ್ದು, ಅದರಂತೆ ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಮಾಡಲಾಗಿದೆ. ಬೀದರ್ ಹಾಗು ಗುಲ್ಬರ್ಗಾ ಜಿಲ್ಲೆಗಳಲ್ಲಿ ಇರುವ ಕುರುಬ ಜನಾಂಗವು ಗೊಂದ ಮತ್ತು ರಾಜಗೊಂಡ, ಪಂಗಡಗಳ ಪರ್ಯಾಯವೆಂದು ಪರಿಗಣಿಸಿ ಸದರಿ ಜಾತಿಯನ್ನು ಪರಿಶಿಷ್ಟ ವರ್ಗದ ಪಟ್ಟಿಯಲ್ಲಿ ಸೇರಿಸಲು ಶಿಫಾರಸ್ಸು ಮಾಡಲಾಗಿದೆ. ಕೊಡಗು ಜಿಲ್ಲೆಯಲ್ಲಿನ ಮೂಲ ನಿವಾಸಿಗಳಾದ ಹಾಲುಮತ ಕುಟುಬರನ್ನು ಹಾಗು ಉತ್ತರ ಕನ್ನಡ ಜಿಲ್ಲೆಯಲ್ಲಿನ ಸಿದ್ಧಿ ಜನಾಂಗವನ್ನು ಅವರ ಆರ್ಥಿಕ, ಸಾಮಾಜಿಕ ಮತ್ತು ಶೈಕ್ಷಣಿಕ ಪರಿಸ್ಥಿತಿ ಹಿನ್ನೆಲೆಯಲ್ಲಿ ಪರಿಶಿಷ್ಟ ವರ್ಗಕ್ಕೆ ಸೇರಿಸಲು ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಮಾಡಲಾಗಿದೆ.

ಇ) ಕೇಂದ್ರ ಸರ್ಕಾರದ ಮಾರ್ಗಸೂಚಿಗಳ ಪ್ರಕಾರ ಪರಿಶಿಷ್ಟ ವರ್ಗಕ್ಕೆ ಯಾವುದೇ ಜಾತಿಯನ್ನು ಸೇರಿಸುವಾಗ ಕೆಳಕಂಡ ಮಾನದಂಡಗಳನ್ನು ಪರಿಗಣಿಸಬೇಕಾಗುತ್ತದೆ.

"Cultural geographical isolations shyness of contact with the community at large."

ಅಲ್ಪಸಂಖ್ಯಾತರ ಅಭಿವೃದ್ಧಿಗೆ ಮೀಸಲಿಟ್ಟ ಹಣ.

2953 - ಶ್ರೀ ಹೆಚ್. ಡಿ. ಬಸವರಾಜ್ (ವಿರಾಜಪೇಟೆ) : ಮಾನ್ಯ ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಪ್ರಸಕ್ತ ಸಾಲಿನಲ್ಲಿ ಅಲ್ಪಸಂಖ್ಯಾತರರಿಗೆ (ಅವರ ಅಭಿವೃದ್ಧಿಗಾಗಿ) ಎಷ್ಟು ಹಣ ಮೀಸಲಿಡಲಾಗಿದೆ?

ಆ) ಬಿಡುಗಡೆಯಾಗಿರುವ ಹಣವೆಷ್ಟು?

ಇ) ಇವರ ಏಳಿಗೆಗಾಗಿ ಇರುವ ಯೋಜನೆಗಳು ಯಾವುವು?

ಈ) ಅಲ್ಪಸಂಖ್ಯಾತರ ಅಭಿವೃದ್ಧಿಗಾಗಿ ಮೀಸಲಿಡಲಾದ ಹಣವನ್ನು ಕೆಲವು ಅಧಿಕಾರಿಗಳು ದುರುಪಯೋಗ ಮಾಡಿಕೊಳ್ಳುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಉ) ಹಾಗಿದ್ದಲ್ಲಿ, ಅವರ ವಿರುದ್ಧ ಯಾವ ಕ್ರಮ ಕೈಗೊಳ್ಳಲಾಗಿದೆ?

ಊ) ಈ ಬಗ್ಗೆ ಎಷ್ಟು ಜನ ಅಧಿಕಾರಿಗಳು ನೌಕರರುಗಳನ್ನು ಅಮಾನತ್ತಿನಲ್ಲಿಡಲಾಗಿದೆ?

ಶ್ರೀ ಮಾಲೀಕಯ್ಯ ವಿ ಗುತ್ತೇದಾರ್ (ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು) :

ಅ) ಪ್ರಸಕ್ತ ಸಾಲಿಗೆ ರೂ. 788.00 ಲಕ್ಷಗಳನ್ನು ಅಲ್ಪಸಂಖ್ಯಾತರ ಅಭಿವೃದ್ಧಿಗಾಗಿ ಆಯವ್ಯಯದಲ್ಲಿ ಅಳವಡಿಸಲಾಗಿದೆ.

ಆ) ಇದುವರೆವಿಗೂ ರೂ. 197.00 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದೆ.

ಇ) ಅಲ್ಪಸಂಖ್ಯಾತರ ಏಳಿಗೆಗಾಗಿ ಈ ಕೆಳಕಂಡ ಯೋಜನೆಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ.

1) ಸ್ವಾವಲಂಬನ ಸಾಲದ ಯೋಜನೆ
2) ವಾಹನ ಚಾಲನಾ ತರಬೇತಿ ಯೋಜನೆ
3) ಫೋರ್‌ಮನ್ ತರಬೇತಿ ಯೋಜನೆ
4) ವೃತ್ತಿಪರ ತರಬೇತಿ ಯೋಜನೆ
5) ಗಂಗಾ ಕಲ್ಯಾಣ ಯೋಜನೆ

ಈ) ಇಲ್ಲ.

ಉ) ಅನ್ವಯಿಸುವುದಿಲ್ಲ.

ಊ) ಅನ್ವಯಿಸುವುದಿಲ್ಲ.

Regarding Ashram Schools.

2954 - Sri. H.D. Basavaraj (Verajpete) : Will the Minister for Social Welfare be pleased to state?

(a) In the State, how may Sch. Caste/Sch. Tribe students are studying upto 4th Std. in Ashrama School each year?